

ಗುರುಗ್ರಂಥ ಸಾಹಿಬಾವನ್ನು ಚೆನ್ನಾಗಿ ಓದಿಕೊಂಡಿದ್ದೇನೆ. ಕೈ ತುಂಬಾ ಗಳಿಸುತ್ತಿದ್ದೇನೆ. ಇಷ್ಟು ಒಳ್ಳೆಯ ಗಂಡನನ್ನು ಬಿಟ್ಟು ಹೋಗಲು ನಿನಗೆ ಮನಸ್ಸು ಬರುತ್ತದಾ – ಎಂದು ಪ್ರಶ್ನಿಸಿದೆ. ಅದಕ್ಕವಳು, ನೀವು ಮದುವೆಗೆ ಮುನ್ನ ಎಲ್ಲವನ್ನೂ ಹೇಳದೆ ನನ್ನನ್ನು ಅಜ್ಞಾನದಲ್ಲಿಟ್ಟಿರಿ. ಇದು ಮೋಸ. ನಿಮ್ಮ ರಹಸ್ಯ ಇನ್ನೇನಿದೆಯೊ? ನಿಮ್ಮಂತಹ ಸುಳ್ಳುಗಾರನೊಡನೆ ಸಂಸಾರ ಹೂಡಲು ನನ್ನಿಂದ ಸಾಧ್ಯವೇ ಇಲ್ಲ. – ಎಂದು ಬಿಟ್ಟಳು.''

ಡಾ. ಸೋನಿಪತ್ ಒಂದು ನಿಮಿಷ ನಿಲ್ಲಿಸಿದರು. ಆಮೇಲೆ ಅವರಾಗಿಯೇ ಮುಂದುವರಿಸಿದರು. “ನಾನು ಅವಳೊಂದಿಗೆ ವಾದಿಸಲು ಹೋಗಲಿಲ್ಲ. ಒಮ್ಮೆ ನಮಗೆ ಯಾರ ಮೇಲಾದರೂ ಅಸಮಾಧಾನ ಉಂಟಾದರೆ ಮತ್ತೆ ಅವರು ಮಾಡುವುದೆಲ್ಲವೂ ತಪ್ಪಾಗಿ ಕಾಣುತ್ತದೆ. ಏನಾದರೂ ಮಾತಾಡಲು ಹೋದರೆ ಉರಿಯುವ ಬೆಂಕಿಗೆ ಪೆಟ್ರೋಲು ಸುರಿದಂತಾಗುತ್ತದೆ. ಆದರೆ, ಮುದ್ದಾದ ಮಗುವಿನ ಮುಖ ನೋಡಿ ಆನಂದದಿಂದ ಕಾಲ ಕಳೆಯುತ್ತಿದ್ದ ನನ್ನ ಬದುಕಿಗೆ ಇವಳ ಡಿವೋರ್ಸ್ ಪ್ರಸ್ತಾಪದಿಂದ ಕತ್ತಲು ಕವಿದಂತಾಯಿತು. ನಾನು ತಗ್ಗಿದೆ.

ನನ್ನನ್ನು ಕ್ಷಮಿಸು. ಇನ್ನು ಈ ಹಂತದಲ್ಲಿ ನೀನು ಮತ್ತು ಮಗು ದೂರವಾದರೆ ನಾನು ಖಂಡಿತಾ ಬದುಕಿ ಉಳಿಯುವುದಿಲ್ಲ. ಒಂದು ವೇಳೆ ಬದುಕಿದರೂ ಅರೆಹುಚ್ಚನಾಗಿ ಬಿಡುತ್ತೇನೆ. ಬದುಕನ್ನು

